



# ಡಾ। ಶ್ರೀ ಶಿವಮೂರ್ತಿ ಮುರುಘಾ ಶರಣರು

ದಿನಾಂಕ : 28-3-20

ಇಂದಿನ ಅಗತ್ಯವೆಂದರೆ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು. ಕೊರೊನಾ ವೈರಸ್ ಹರಡದಂತೆ ಮುನ್ನೆಚ್ಚರಿಕೆ ವಹಿಸಿ ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಪ್ರಾಥಮಿಕ ಹಂತವಾಗಿದೆ. ಯಾವುದೇ ಹಂತದಲ್ಲೂ ಜನರು ಗುಂಪು ಸೇರುವುದನ್ನು ತಡೆಯಬೇಕು. ಸರ್ಕಾರ ಅಥವಾ ಪೊಲೀಸ್ ಮುಖಾಂತರವಾಗಿಯೇ ಕ್ರಮಗಳನ್ನು ಜರುಗಿಸುವುದಕ್ಕಿಂತ ಜನರೆ ತಮ್ಮ ಚೌಕಟ್ಟಿನೊಳಗೆ ಸಂರಕ್ಷಣೆ ಮಾಡಿಕೊಳ್ಳುವಂತಾದರೆ ಕಠಿಣತರವಾದ ಕ್ರಮಗಳ ಅಗತ್ಯ ಇರುವುದಿಲ್ಲ. ಅತ್ಯಂತ ಅನಿವಾರ್ಯವಾಗಿರುವ ಸಂದರ್ಭದಲ್ಲಿ ರಸ್ತೆಗೆ ಬಂದಾಗ ಮಾಸ್ಕ್ ಬಳಸುವುದು ಕಡ್ಡಾಯ ಆಗಬೇಕು. ಯಾವುದೇ ವ್ಯಕ್ತಿ ಮಾಸ್ಕ್ ಧರಿಸುವುದರಿಂದ ಬೇರೆಯವರಿಗೆ ವೈರಾಣು ಹರಡದಂತೆ ಬೇರೆಯವರಿಂದ ತನಗೆ ಹರಡದಂತೆ ಮುಂಜಾಗ್ರತೆ ವಹಿಸಬೇಕಾಗುತ್ತದೆ. ಸಾಮಾಜಿಕ ಅಂತರದ ಜೊತೆಯಲ್ಲಿ ಇಂದಿನ ಸಂದರ್ಭದ ಅನಿವಾರ್ಯ ಎಂದರೆ ಸ್ವದಿಗ್ಬಂಧನ. ಪ್ರತಿಯೊಬ್ಬರು ತಮಗೆ ತಾವೆ ದಿಗ್ಬಂಧನ ವಿಧಿಸಿಕೊಳ್ಳಬೇಕು. ದಿಗ್ಬಂಧನ ಜೊತೆಯಲ್ಲಿ ಮತ್ತೊಂದು ಅಗತ್ಯವಾದ ಕ್ರಮವೆಂದರೆ ಗೃಹಬಂಧನ. ತಮ್ಮ ಹಾಗು ತಮ್ಮವರ ಪ್ರಾಣರಕ್ಷಣೆಗಾಗಿ ಸ್ವದಿಗ್ಬಂಧನ ಮತ್ತು ಗೃಹಬಂಧನ ಅತ್ಯಂತ ಅನಿವಾರ್ಯ.

ರಾಜ್ಯ ಮತ್ತು ರಾಷ್ಟ್ರ ಲಾಕ್‌ಡೌನ್ ಆಗಿರುವ ಸಂದರ್ಭದಲ್ಲಿ ಕೆಲವರು ಹಸಿವಿನಿಂದ ಪರಿತಪಿಸುವ ಸಂದರ್ಭವಿದೆ. ಅಂತವರ ಮೇಲೆ ಕರುಣೆ ತೋರಬೇಕಾಗುತ್ತದೆ. ಅಗತ್ಯ ವಸ್ತುಗಳು ಸಿಗುತ್ತಿಲ್ಲವೆಂಬ ಅಸಮಧಾನವಿದೆ. ಅದಕ್ಕಾಗಿ ದಿನದಲ್ಲಿ ಇಂತಿಷ್ಟು ಗಂಟೆ ರಿಯಾಯಿತಿ ಕೊಡುವುದರಿಂದ ಅನುಕೂಲವಾಗುತ್ತದೆ. ವಿಶೇಷವಾಗಿ ಕೇಂದ್ರಸರ್ಕಾರ ಅಸಹಾಯಕರಿಗೆ ಸಹಾಯ ಮಾಡಲು ಸಾವಿರಾರು ಕೋಟಿಗಳ ಯೋಜನೆ ರೂಪಿಸಿದ್ದು ಸ್ವಾಗತಾರ್ಹ. ಹಾಗೆ ರಾಜ್ಯಸರ್ಕಾರವು ಪಡಿತರ ವ್ಯವಸ್ಥೆ, ಇಂದಿರಾ ಕ್ಯಾಂಟೀನ್ ಮೂಲಕ ಮುಂತಾದ ಅನುಕೂಲತೆಗಳನ್ನು ಮಾಡಿಕೊಟ್ಟಿರುವುದು ಪ್ರಶಂಸನೀಯ.

ಜನರು ಈ ಮಧ್ಯದಲ್ಲಿ ಸಹನೆಯನ್ನು ಕಳೆದುಕೊಳ್ಳಬಾರದು. ಗೃಹಬಂಧನಕ್ಕೆ ಒಳಗಾದ ಸಂದರ್ಭದಲ್ಲಿ ಬೇಸರ ಆಗುವುದು ಸಾಮಾನ್ಯ. ಆ ಬೇಸರವನ್ನು ಸಡಗರವಾಗಿ ಪರಿವರ್ತಿಸಲು ಕಲೆ, ಹಾಡುಗಾರಿಕೆ, ಬರವಣಿಗೆ, ಕುಶಲಕಲೆ, ಮನೆಯವರೊಂದಿಗೆ ಹಾರ್ದಿಕವಾದ ಚಿಂತನೆ, ಚರ್ಚೆ ಆಲಿಸುವುದು, ಗ್ರಂಥಾಧ್ಯಯನ ಮಾಡುವುದು ಹೀಗೆ ಸಾಂಸ್ಕೃತಿಕವಾದ ಪರಿಸರದಲ್ಲಿ ವಾಸಿಸುವ ಕ್ರಮವನ್ನು ರೂಢಿಸಿಕೊಂಡರೆ ಯಾವ ತೊಂದರೆ ಇಲ್ಲ. ಇದಕ್ಕೆ ಬದಲಾಗಿ ಅನಾರೋಗ್ಯಕರವಾದ ಆಟಪಾಠಗಳಲ್ಲಿ ತೊಡಗುವುದರಿಂದ ಮತ್ತಷ್ಟು ತೊಂದರೆ ಅನುಭವಿಸಬೇಕಾಗುತ್ತದೆ. ಇಸ್ಪೀಟ್ ಆಡುವುದು, ಧೂಮಪಾನ ಮಾಡುವುದು, ಮದ್ಯಪಾನ ಸೇವಿಸುವುದು ಇಂತಹ ದುಶ್ಚಟಗಳಿಂದ ದೂರವಿದ್ದು ಆರೋಗ್ಯವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಕೆಲ ಯುವಕರು ರಸ್ತೆಗಳು ಮುಕ್ತವಾಗಿರುತ್ತವೆಂದು ವ್ಹೀಲಿಂಗ್ ಮಾಡುವ, ವೇಗವಾಗಿ ಓಡಿಸುವ ಮುಂತಾಗಿ ದುರುಪಯೋಗಪಡಿಸಿಕೊಳ್ಳುವ ವಿಧಾನ ಸರಿಯಲ್ಲ.

ಕೊರೊನಾ ವೈರಸ್ ಹಿನ್ನೆಲೆಯಲ್ಲಿ ಕೇಂದ್ರಸರ್ಕಾರ, ರಾಜ್ಯಸರ್ಕಾರ, ಆರೋಗ್ಯ ಇಲಾಖೆ ಹಾಗು ಪೊಲೀಸ್ ಇಲಾಖೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿರುವುದು ಸ್ವಾಗತಾರ್ಹ. ಹಾಗೆ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಎಸ್.ಜೆ.ಎಂ. ವಿದ್ಯಾಪೀಠದ ಆಶ್ರಯದಲ್ಲಿ ನಡೆಯುತ್ತಿರುವ ಬಸವೇಶ್ವರ ವೈದ್ಯಕೀಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬಸವೇಶ್ವರ ಆಸ್ಪತ್ರೆ ಎದುರಿಗಿರುವ ಎಸ್‌ಜೆಎಂ ಮಹಿಳಾ ವಸತಿ ನಿಲಯ, ಹೊಳಲ್ಕೆರೆ ರಸ್ತೆಯಲ್ಲಿರುವ ಎಸ್‌ಜೆಎಂ ಕಲಾ, ವಿಜ್ಞಾನ ಮತ್ತು ಕಾಲೇಜು ಹಾಗು ವಸತಿ ನಿಲಯ ಮೊದಲಾದ ಕಡೆ ಜಿಲ್ಲಾಡಳಿತದ ಸಹಯೋಗದೊಂದಿಗೆ ಕ್ವಾರಂಟೈನ್ ಚಿಕಿತ್ಸೆ ಪಡೆಯುವ ರೋಗಿಗಳಿಗೆ ಅವಕಾಶ ಮಾಡಿಕೊಡಲಾಗಿದೆ.

(ಡಾ. ಶಿವಮೂರ್ತಿ ಮುರುಘಾ ಶರಣರು)

ಬಸವಕೇಂದ್ರ, ಶ್ರೀ ಮುರುಘಾಮಠ, ಚಿತ್ರದುರ್ಗ - ೫೭೭ ೫೦೨ ದೂರವಾಣಿ : ೦೮೧೯೪ - ೨೨೨೨೫೦